ವೇಶ್ಯೆಯರಾದ ಮುಖವನ್ನೂ ಪುಸ್ತಕವು ಸೂಚಿಸುತ್ತದೆ.

ಕರ್ನಾಟಕದ ಶಾಸನವೊಂದರಲ್ಲಿ ಧೂಪದ ಸೂಳೆ, ಕಂಬದ ಸೂಳೆ ಎಂಬಂಥ ಪ್ರಯೋಗಗಳನ್ನು ಜಗದೀಶ್ ಹೆಕ್ಕಿಕೊಟ್ಟಿದ್ದಾರೆ. ಅಲ್ಲದೆ ನಾಯಕಸಾನಿ, ದೊರೆಸಾನಿ, ವೇಶ್ಯೆ, ಪಣ್ಯಾಂಗನೆ, ಕಲಾವಂತರು, ಪಾತರದವರು, ಎಂಬ ಹೆಸರುಗಳಲ್ಲದೆ ದೇವದಾಸಿಯರಲ್ಲೇ ದತ್ತಾ (ದಾನವಾಗಿ ಬಂದವಳು) ವಿಕ್ರೀತಾ (ಮಾರಾಟವಾದವಳು) ಭೃತ್ಯಾ (ತನ್ನ ಕುಟುಂಬದವರಿಗೆ ನೆರವಾಗಲೆಂದು ದೇವದಾಸಿಯಾದವಳು), ಭಕ್ತ (ದೇವರಿಗೆ ಸಮರ್ಪಿಸಿಕೊಂಡವಳು) ಹೃತಾ (ಪ್ರಲೋಭನೆಗೆ ಒಳಗಾಗಿ ದೇವದಾಸಿಯಾದವಳು), ಅಲಂಕಾರ (ಶಾಸ್ತ್ರೀಯ ತರಬೇತಿ ಪಡೆದವಳು) ರುದ್ರಗಣಿಕಾ (ದೇವಸ್ಥಾನದಲ್ಲಿ ಸಲ್ಲಿಸುವ ಸೇವೆಗೆ ವೇತನಪಡೆಯುವವಳು) ಎಂಬುದಾಗಿ ಇರುವ ಉಪವಿಭಾಗಗಳತ್ತ ಜಗದೀಶ್ ಗಮನ ಸೆಳೆಯುತ್ತಾರೆ. ಬಲುದೊಡ್ಡ ಮಹಿಳಾ ಸಮುದಾಯವೊಂದರ ಇಣುಕು ನೋಟ ದೊರೆಯುವಂತೆ ಜಗದೀಶ್ ಅವರ ಬರಹವಿದೆ.

‘ದೇವದಾಸಿ ಸಮುದಾಯದ ಮುತ್ತು ರತ್ನಗಳು’ ಅಧ್ಯಾಯದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳಿಗೆ ಜೀವತುಂಬಿದ, ಭಾರತೀಯ ಕಲೆಯ ಬೆಳವಣಿಗೆಗೆ ಕಾರಣರಾದ ಪ್ರಮುಖರ ಸಂಕ್ಷಿಪ್ತ ಪರಿಚಯವಿದೆ. ಇಲ್ಲಿ ಕುತೂಹಲದ ಸಂಗತಿಯೊಂದನ್ನು ಗಮನಿಸಬಹುದು. ದೇವದಾಸಿಯರಿಗೆ ನಿರ್ದಿಷ್ಟ ಜಾತಿ ಇರಲಿಲ್ಲವೆಂಬುದು ನಿಜ. ಎಲ್ಲ ಜಾತಿಗಳ ಮಹಿಳೆಯರೂ, ದಕ್ಷಿಣ ಭಾರತದಲ್ಲಿ ವಿವಿಧ ಕಾರಣಗಳಿಗೆ ದೇವದಾಸಿಯರಾಗಿದ್ದಾರೆ. ಆಧುನಿಕ ಕಾಲದಲ್ಲಿ ದೇವದಾಸಿಯರ ಮಕ್ಕಳು ನರ್ತನ, ಸಂಗೀತಗಳನ್ನು ಮಾತ್ರವಲ್ಲದೆ ಉದ್ಯಮ, ವೈದ್ಯಕೀಯ ಮೊದಲಾದ ವೃತ್ತಿಗಳಲ್ಲೂ ತೊಡಗಿಕೊಂಡಿದ್ದಾರೆ. ನಿಜ. ಆದರೆ ಸಂಗೀತ ನರ್ತನದಂಥ ಕಲೆಗಳಲ್ಲಿ ದೊರೆಯುವ ಮನ್ನಣೆ, ಸಂಪತ್ತು, ಖ್ಯಾತಿಗಳಿಗೂ ದೇವದಾಸಿಯರ ತಾಯಂದಿರ ಜಾತಿಗೂ ಸಂಬಂಧವಿದೆಯೇ ಎಂಬ ಪ್ರಶ್ನೆ ಪರಿಶೀಲನೆಗೆ ಅರ್ಹವಾಗಿ ಕಾಣುತ್ತದೆ.

ಭಾರತದಲ್ಲಿ ನಾಟ್ಯಶಾಸ್ತ್ರ ಬೆಳೆಯಿತು, ಶಾಸ್ತ್ರೀಯ ಸಂಗೀತ ಬೆಳೆಯಿತು. ಅವನ್ನು ಕುರಿತು ಬರೆದ ವಿದ್ವಾಂಸರು, ಚಿಂತಕರು ಪ್ರಸಿದ್ಧಿಯನ್ನು ಪಡೆದರು. ಆದರೆ ಪ್ರಾಚೀನ ಕಾಲದಲ್ಲಿ ಕಲಾಶಾಸ್ತ್ರಗಳು ಬೆಳೆಯುವುದಕ್ಕೆ ಪ್ರಯೋಗಶೀಲರಾಗಿ ಕಲಾವಿದರಾಗಿದ್ದ ದೇವದಾಸಿಯರ ಬಗ್ಗೆ ಕುತೂಹಲ ಯಾಕೆ ಚಿಂತಕರಲ್ಲಿ ಹುಟ್ಟಲಿಲ್ಲ ಎಂಬ ಪ್ರಶ್ನೆಯನ್ನು ಜಗದೀಶ್ ಅವರು ಎತ್ತುತ್ತಾರೆ. ಇದಕ್ಕೆ ಮಹಿಳೆಯರನ್ನು ಕುರಿತು ಜಗತ್ತಿನಾದ್ಯಂತ ವ್ಯಾಪಕವಾಗಿರುವ ಗಂಡಾಳ್ವಿಕೆಯ ಮನೋಧರ್ಮವೇ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ದೈವತ್ವವಿದ್ದ ದೇವತಾಸ್ತ್ರೀ ಎಂಬ ಮನ್ನಣೆಗೆ ಪಾತ್ರವಾಗಿದ್ದ ದೇವದಾಸಿ, ದೇಹ ಮಾರಿಕೊಂಡು ಬದುಕುವ ಹೆಣ್ಣು ಎಂಬ ಅವಮಾನಕ್ಕೆ ಗುರಿಯಾಗಿರುವ ದುಃಸ್ಥಿತಿಯ ಸೂಚನೆಯನ್ನು ಜಗದೀಶ್ ನೀಡಿದ್ದಾರೆ. ‘ಹಾಡು’ ಪಲ್ಲಟಗೊಂಡು ‘ಪಾಡು’ ಆದ ದುರಂತ ಮನಸನ್ನು ಕಲಕುತ್ತದೆ.

ಓದುಗರನ್ನು ಹಾಗೆ ಚಿಂತನೆಗೆ ಹಚ್ಚುವಂತೆ ಮಾಡುವುದೇ ಲೇಖಕರ ಉದ್ದೇಶ, ಅದು ಈ ಪುಸ್ತಕದಲ್ಲಿ ಈಡೇರಿದೆ. ಹೀಗೆ ಮೆಚ್ಚಿಕೊಳ್ಳುವಾಗಲೂ ಎರಡು ಕೊರತೆ ಗಮನಕ್ಕೆ ಬರುತ್ತವೆ. ಲೇಖಕರು ಸಂಗ್ರಹಿಸಿರುವ ಅಪಾರ ಮಾಹಿತಿಯನ್ನು ಇನ್ನೊಂದು ಸ್ವಲ್ಪ ವ್ಯವಸ್ಥಿತವಾಗಿ ಜೋಡಿಸಬಹುದಾಗಿತ್ತು ಅನ್ನುವುದೊಂದು ಕೊರತೆ; ಈ ಕೊರತೆಯ ಕಾರಣದಿಂದಲೇ ಪುನರುಕ್ತಿಯೆಂಬ ಇನ್ನೊಂದು ಕೊರತೆಯೂ ಉಂಟಾಗಿದೆ. ಕೆಲವು ಸಂಗತಿಗಳು, ಉದಾಹರಣೆಗೆ ದೇವದಾಸಿಯರಿಗೆ ಇರುವ ಬೇರೆ ಬೇರೆ ಹೆಸರುಗಳಂಥ ವಿವರ ಅನೇಕ ಬಾರಿ ಪುನರುಕ್ತವಾಗುತ್ತದೆ. ಹಾಗೆಯೇ ಲೇಖಕರು ನೀಡಿರುವ ಆಧಾರ ಗ್ರಂಥಗಳ ಹೆಸರು ಮತ್ತು ಲೇಖಕರ ಹೆಸರಿನೊಡನೆ ಪ್ರಕಾಶಕರ ಮತ್ತು ಪ್ರಕಾಶನಗೊಂಡ ವರ್ಷಗಳ ವಿವರವನ್ನೂ ನೀಡಿದ್ದರೆ ಕೆಲವಾದರೂ ಓದುಗರಿಗೆ ಹೆಚ್ಚಿನ ಅನುಕೂಲವಾಗುತಿತ್ತು. ಈ ಕೊರತೆಗಳನ್ನು ಮುಂದಿನ ಮುದ್ರಣದ ಸಂದರ್ಭದಲ್ಲಾದರೂ ತಿದ್ದಿಕೊಳ್ಳುವರೆಂದು ಆಶಿಸೋಣ.

●